The Board has also directed M/s. Chamundeswari Sugar Ltd., Kalamuddanadoddi, to put up suitable treatment units to treat their effluents to the prescribed standards and to utilise the treated effluents on their own land for irrigation.

ಶ್ರೀ ಎ. ಲಕ್ಷ್ಮೀಸಾಗರ್.—When a Policy decision is taken, that should be followed by one and all. But there is violation of this policy. Some have been allowed to retain their Chairmanship or Directorship of the Corporations. What are you going to say?

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ನಾನು ಮಧ್ಯಾಹ್ನ ೪ ಗಂಟೆಯ ಹೊತ್ತಿಗೆ ತಿಳಿಸುತ್ತೇನೆ.

Rise in Prices of essential articles

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಸಾಮಾನ್ಯವಾಗಿ ಉತ್ಪಾದನೆ ಆಗತಕ್ಕ ಎಲ್ಲ ವಸ್ತುಗಳ ಬೆಲೆಯೂ ಗಗನಕ್ಕೆ ಏರುತ್ತಾ ಇದೆ. ಕಾಗದದ ಬೆಲೆ, ಬಟ್ಟೆ ಬೆಲೆ, ಬೆಂಕಿ ಪೊಟ್ಟಣದ ಬೆಲೆ ದಿನವಹೀ ಏರುತ್ತಾ ಇದೆ. ಆದರೆ ರೈತರು ಬೆಳೆಯತಕ್ಕ ರಾಗಿ, ಭತ್ತ, ಜೋಳ ಇಂತಹ ಧಾನ್ಯಗಳ ಬೆಲೆ ಈ ಹಿಂದೆ ೨೦ ವರ್ಷದಲ್ಲಿ ಏನು ಇತ್ತೋ ಆದೇ ಇದೆ; ಅಥವಾ ಇನ್ನೂ ಸ್ವಲ್ಪ ಕಡಿಮೆ ಆಗಿರಬಹುದೆಂದು ಹೇಳಿದರೆ ತಪ್ಪಾಗಲಾರದು. ಇದನ್ನು ಬೆಳೆಯತಕ್ಕ ರೈತ ಮತ್ತಿತರ ಆಗತ್ಯ ವಸ್ತುಗಳನ್ನು ಕೊಳ್ಳಲು ಹೋದಾಗ ಅವುಗಳ ಬೆಲೆ ಒಂದಕ್ಕೆ ನಾಸ್ನೂರು, ಐನೂರಷ್ಟು ಹೆಚ್ಚು ಆಗಿದ್ದು, ಆತನು ಬೆಳೆಯತಕ್ಕ ಬೆಳೆಯ ಬೆಲೆ ಅಷ್ಟೇ ಇದೆ. ದಯಮಾಡಿ ಸಂಬಂದಪಟ್ಟ ಮಂತ್ರಿಗಳು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Transfer of Doctors

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇವತ್ತಿನ ಪತ್ರಿಕೆಯನ್ನು ನೋಡಿ. ಹೋದ ತಿಂಗಳು ೨೮ನೇ ತಾರೀಖು ಕೆಲವಾರು ವೈದ್ಯಕೀಯ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಅವರನ್ನು ತಕ್ಷಣ ಏಕಾ-ಏಕಿ ವರ್ಗಾವಣೆ ಮಾಡಿ, ಅವರ ಕೈಗೆ ಆರ್ಡರ್ ಕೊಟ್ಟು, ತಕ್ಷಣ ಅವರನ್ನು ನೇಮಿಸಿದ ಕಡೆಗಳಲ್ಲಿ ಕೆಲಸಕ್ಕೆ ಹಾಜರಾಗಿ ಚಾರ್ಜ್ ತೆಗೆದುಕೊಳ್ಳಬೇಕೆಂದು ಹೇಳಲಾಗಿ, ಈ ಬಗ್ಗೆ ಕೆಲವಾರು ಜನ ಚಾರ್ಜ್ ತೆಗೆದುಕೊಂಡಿರುತ್ತಾರೆ. ಮತ್ತೇ ಒಂದನೇ ತಾರೀಖು ಆದಮೇಲೆ ಅವರೆಲ್ಲರೂ ವಾಪಸ್ ತಮ್ಮ ಸ್ವಸ್ಥಾನಕ್ಕೆ ಬರಬೇಕೆಂದು, ಈ ವೈದ್ಯಕೀಯ ಇಲಾಖೆಯವರು ಅವರೆಲ್ಲರಿಗೂ ತಿಳಿಸಿದ್ದಾರೆ ಈ ವೈದ್ಯಕೀಯ ಇಲಾಖೆಯಲ್ಲಿ ಕೇವಲ ಮೂರು ದಿವಸಗಳಲ್ಲಿ ಏನು ಆಯಿತು ಎಂದರೆ ಇದರಿಂದ ಬಹಳ ಜನರಿಗೆ ತೊಂದರೆಯಾಗಿದೆ. ಈ ೧೯೧ ಜನರನ್ನು ೨೮ನೇ ತಾರೀಖು ವರ್ಗ ಮಾಡಿ, ಮತ್ತೆ ೧ನೇ ತಾರೀಖು ಆದನ್ನು ಕ್ಯಾನ್‌ಸಲ್ ಮಾಡುವುದಕ್ಕೆ ಕಾರಣ ಏನು ಎಂಬುದನ್ನು ದಯವಿಟ್ಟು ಸರ್ಕಾರ ತಿಳಿಸಬೇಕು.

Witchcraft Practised in Basavapura

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಪ್ರಜಾವಾಣಿ ದಿನಪತ್ರಿಕೆಯಲ್ಲಿ ಒಂದು ಪ್ರಮುಖ ವಿಷಯ ಬಂದಿದೆ ಗುಲ್ಬರ್ಗ ಜಿಲ್ಲೆಯ, ಬಸವಪುರ ಎಂಬ ಹಳ್ಳಿಯಲ್ಲಿ ಇರುವ ಒಬ್ಬ ವ್ಯಕ್ತಿ ಭಂಗಿ ಮಾಯಾ ಮಂತ್ರ ಮಾಡತಕ್ಕ ವ್ಯಕ್ತಿ ಸುತ್ತಮುತ್ತಲ ಜನರಿಗೆ ಮೋಸ ಮಾಡಿ, ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡಿ ಅವರಿಗೆ ವ್ಯಭಿಚಾರ ಮಾಡತಕ್ಕ ಕೆಲಸವನ್ನು ಮಾಡಿರುತ್ತಾನೆ. ಈ ಬಗ್ಗೆ ಪೋಲೀಸ್ ಅಧಿಕಾರಿಗಳಿಗೆ ದೂರು ಸಹ ಹೋಗಿ, ಅಲ್ಲಿನ ಪೋಲೀಸ್ ಅಧಿಕಾರಿಗಳು ಧೈರ್ಯ ಸಾಲದೆ, ಆ ವ್ಯಕ್ತಿಯನ್ನು ಬಂಧಿಸುವುದಕ್ಕೆ ಸಮರ್ಥರಾಗದೇ ಕಂಗೆಟ್ಟಿದ್ದಾರೆ. ಸುತ್ತಮುತ್ತಲ ಜನರು ಏನು ಮಾಡಬೇಕೆಂದು ತಿಳಿಯದೇ ಈ ವಿಷಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ದಯಮಾಡಿ ಸರ್ಕಾರ ಈ ಒಬ್ಬ ವ್ಯಕ್ತಿಯನ್ನು ಬಂಧಿಸಿ ಅವನಿಗೆ ತಕ್ಕ ಶಿಕ್ಷೆ ಕೊಡುವುದರ ಬಗ್ಗೆ ಆಸ್ಥೆ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.